ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕ 1991

ಶ್ರೀ ವೀರಪ್ಪ ಮೊಯಿಲಿ : (ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಸಹಕಾರಿ ರಾಜ್ಯ ಸಚಿವರ ಪರವಾಗಿ ನಾನು "1991ನೇ ಸಾಲಿನ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು" ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಅದನ್ನು ಮಾನ್ಯ ಸಹಕಾರಿ ಮಂತ್ರಿಗಳೇ ಇಂಟ್ರೊಡ್ಯೂಸ್ ಮಾಡಿದರೆ ಒಳ್ಳೆಯದು.

Mr. SPEAKER : The Ministers must take personal responsibilty for placing the Bills before the House. The House is entitled to this as a matter or right I will have to take a very serious objection. It is OK if there is any legitimate work or their presence is required in the upper House. Unless they intimate me this will be viewed seriously. If there are any legitimate work in the other House we can uncerstand and we respect.

ಶ್ರೀ ವಾಟಾಳ್‌ನಾಗರಾಜ್ : ಅನೇಕ ಇಲಾಖೆಯ ಕಾಗದ ಪತ್ರಗಳನ್ನು ನಾನು ಮಂಡಿಸುತ್ತೇನೆ. ನಾನು ಮಂಡಿಸುತ್ತೇನೆ ಎಂದು ಹೇಳಿದರೆ ಒಬ್ಬ ಮಂತ್ರಿ 12 ಜನ ಮಂತ್ರಿಗಳು ಆದ ಹಾಗೆ ಆಗುತ್ತದೆ.

ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿ ವಿಧೇಯಕ 1991

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಮಾನ್ಯ ಯೋಜನೆ ಹಾಗೂ ಸಾಂಖ್ಯಿಕ ಹಣಕಾಸು ಸಚಿವರು) : ಮಾನ್ಯ ಅಧ್ಯಕ್ಷರೆ, "1991ರ ಹೈದರಾಬಾದ್ ಕರ್ನಾಟಕ ಪ್ರದೇಶಭಿವೃದ್ಧಿ ಮಂಡಲಿ ವಿಧೇಯಕ "ವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಮಂಡಿಸಲಾಗಿದೆ. I will take it that the motion on behalf of the minister for Co-operation is not moved. He has no business to be absent. I need guidance of this House.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಅನುಮತಿಯನ್ನು ಕೊಟ್ಟರೆ,

ಅಧ್ಯಕ್ಷರು : ಇಲ್ಲ ಅನುಮತಿ ಇಲ್ಲ. ನಾನು ತಮ್ಮಗಳನ್ನೇ ಒಂದು ಸಲಹೆ ಕೇಳುತ್ತಿದ್ದೇನೆ. ಈಗ ಅನೇಕ ಕಾರ್ಯಕಲಾಪಗಳು ಸದನದ ಮುಂದಿದೆ. ಸದನದ ಕಾರ್ಯಕಲಾಪಗಳ ಸಮಿತಿಯ ನಿರ್ಧಾರದಂತೆ ಇವತ್ತೆ ಸದನ ಮುಗಿಯಬೇಕಾಗಿತ್ತು. ಆದರೆ ಅನ್‌ಫಿನಿಷಡ್ ವರ್ಕ್ಸ್ ಇದೆ. ಈ ದಿನ ಸದನದ ಕಾರ್ಯಕಲಾಪಗಳ ಸಮಿತಿಯು ಸಭೆ ಸೇರಿ ಇವತ್ತು ಮತ್ತು ಸೋಮವಾರ ಕಾರ್ಯಕಲಾಪಗಳನ್ನು ನಡೆಸುವುದು ಎಂದು ನಿರ್ಧಾರಮಾಡಿದೆ. ಈಗ ರೇಷ್ಮೆ ಹುಳುಗಳಿಗೆ ಗಂಟು ರೋಗ ತಗಲಿರುವಂತಹ ವಿಷಯ. ಸರ್ವೆನಂಬರ್ 174 ಮತ್ತು 175ರ ಭೂ ಸ್ವಾಧಿನದ ವಿಷಯದ ಜೊತೆಗೆ ನಿಯಮ 159ರ ಮೇರೆಗೆ ಪ್ರಸ್ತಾವ ಇದೆ. ಜೊತೆಗೆ ಇಂದು ಮಂಡನೆ ಆಗಿರತಕ್ಕ ಸರ್ಕಾರೀ ವಿಧೇಯಕಗಳ ಮೇಲೆ ಚರ್ಚೆ ಆಗಬೇಕು ಮತ್ತು ಅಂಗೀಕಾರ ಆಗಬೇಕು. ಇದರಿಂದಾಗಿ ಹೇಗೆ ಮುಂದುವರೆಸಬೇಕು ಎಂದು ನನಗೆ ಅರ್ಥ ಆಗುತ್ತಾ ಇಲ್ಲ.